ಹೆಚ್ಚುವರಿ ಪಟ್ಟಿಯಿಂದ ರೀಡಿಪ್ಲಾಯ್‌ಮೆಂಟ್ ಮೂಲಕ ತುಂಬಲು ಕ್ರಮ ವಹಿಸಲಾಗುತ್ತಿದೆ.

ಶ್ರೀರಂಗಪಟ್ಟಣ ತಾಲ್ಲೂಕಿನ ಮೀನುಗಾರರಿಗೆ ವಸತಿ ಸೌಕರ್ಯ ಒದಗಿಸುವುದು.

2932(3809)

ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ(ಶ್ರೀರಂಗಪಟ್ಟಣ): ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿರುವ ಬೆಸ್ತ ಜನಾಂಗಕ್ಕೆ ವಸತಿ ಸೌಕರ್ಯದ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದುವರೆವಿಗೆ ಬೆಸ್ತ ಜನಾಂಗದ ಎಷ್ಟು ಕುಟುಂಬಗಳಿಗೆ ವಸತಿ ಸೌಕರ್ಯವನ್ನು ಒದಗಿಸಲಾಗಿದೆ?

ಇ) ಇನ್ನು ಎಷ್ಟು ಕುಟುಂಬಗಳಿಗೆ ವಸತಿ ಸೌಕರ್ಯವನ್ನು ಒದಗಿಸಬೇಕಾಗಿದೆ. ಈ ಸಾಲಿನಲ್ಲಿ ವಸತಿ ಸೌಕರ್ಯ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆಯೇ?

ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ಹೌದು.

ಆ) 215 ಮೀನುಗಾರಿಕಾ ಕುಟುಂಬಗಳು.

ಇ) ಇನ್ನೂ 172 ಕುಟುಂಬಗಳಿಗೆ ವಸತಿ ಸೌಕರ್ಯವನ್ನು ಒದಗಿಸಬೇಕಾಗಿದೆ. 2001-02ನೇ ಸಾಲಿನಲ್ಲಿ 20 ಮನೆಗಳನ್ನು ಒದಗಿಸಲು ಕ್ರಮಕೈಗೊಳ್ಳಲಾಗಿದೆ.

ಮಾವು, ಹಲಸು, ಬೇವು ಇತ್ಯಾದಿ ಮರಗಳು ಪ್ರತಿದಿನ ಬಿಡುಗಡೆ ಮಾಡುವ ಪ್ರಾಣ ವಾಯುವಿನ ಪ್ರಮಾಣ.

2933(3679)

ಶ್ರೀ ಪಾಟೀಲ್ ಡಿ.ಆರ್.(ಗದಗ್): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೂರ್ಣ ಪ್ರಮಾಣದಲ್ಲಿ ಬೆಳೆದ ಬೇವು, ಹಲಸು, ಮಾವು, ಹೊನ್ನೆ ಮೊದಲಾದ ದೊಡ್ಡ ಮರಗಳು ಒಂದು ದಿನಕ್ಕೆ ಬಿಡುಗಡೆ ಮಾಡುವ ಪ್ರಾಣ ವಾಯುವಿನ ಪ್ರಮಾಣ ಎಷ್ಟು? ಅದರ ಮೌಲ್ಯ ಎಷ್ಟು? ಪ್ರತ್ಯೇಕ ಮರಗಳ ವಿವರಗಳನ್ನು ನೀಡುವುದು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಈ ವಿವರಗಳನ್ನು ನಿಗಧಿಪಡಿಸುವ ವ್ಯವಸ್ಥೆ ಅರಣ್ಯ ಇಲಾಖೆಯಲ್ಲಿ ಇಲ್ಲದ್ದರಿಂದ ಈ ವಿವರ ಲಭ್ಯವಿಲ್ಲ.

ರಾಜ್ಯದಲ್ಲಿ ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸುವುದು.

2934(3680)

ಶ್ರೀ ಪಾಟೀಲ್ ಡಿ.ಆರ್.(ಗದಗ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸರ್ಕಾರದ ಅಧಿಕಾರಾವಧಿಯಲ್ಲಿ ಬೇರೆ ಬೇರೆ ಶ್ರೇಣಿಯ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಿದ್ದು ಎಷ್ಟು?

ಆ) ಮೇಲ್ದರ್ಜೆಗೇರಿಸಿದ್ದ ಆಸ್ಪತ್ರೆಗಳ ಸಂಖ್ಯೆ ಎಷ್ಟು? ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು.

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಯಾವುದೂ ಇಲ್ಲ.

ಆ) ಯಾವುದೇ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿರುವುದಿಲ್ಲ.

ಮುಂಡರಗಿ ಕಲಾಭವನ ನಿರ್ಮಾಣ ಕಾರ್ಯ.